# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 85 / 2015

ಪಿರ್ಯಾದುದಾರರು ಃ ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ ಃ ಸಿದ್ದಗೊಂಡಬೀರದಾರ**

**ಚಾಸಾ ಃ- 03 / ಪ್ರಾಸಾ ಃ- 01**

| | |
|---|---|
| ಹೆಸರು | **ಗಂಗರಾಜು** |
| ತಂದೆಯ / ಗಂಡನ ಹೆಸರು | **ಸಿದ್ದಪ್ಪ** |
| ವಯಸ್ಸು | **41** |
| ಉದ್ಯೋಗ | **ಹೊಂ ಗಾರ್ಡ್** |
| ವಿಳಾಸ | **ಕುದೂರು** |

**ದಿನಾಂಕಃ 12-04-2019 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಮಹಜರ್ ಆಗಿದ್ದು, ಮಹಜರ್ ನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ನಾನು ಸುಮಾರು 4-5 ವರ್ಷಗಳ ಹಿಂದೆ ಕುದೂರು ಪೋಲಿಸ್ ಠಾಣೆಯಲ್ಲಿಯೇ ಪೋಲಿಸರು ನಿಪಿ-1 ಕ್ಕೆ ಸಹಿ ಮಾಡಿ ಎಂದು ಕೇಳಿದ ಬಾಬ್ತು ಸಹಿ ಮಾಡಿದ್ದು, ನಿಪಿ-1 ರಲ್ಲಿ ಏನು ಬರೆದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ, ಪೋಲಿಸರ ಕೋರಿಕೆಯ ಮೇರೆಗೆ ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-1 ರ ಕಾಲಕ್ಕೆ ಮಹಜರ್ ಕ್ರಮ ಅನುಸರಿಸಿ ನನ್ನ ಸಮಕ್ಷಮ

**ಸಿ.ಸಿ. ಸಂಖ್ಯೆ: 85 / 2015**
**ಚಾಸಾ-03 / ಪ್ರಾಸಾ-01**

ಯಾವುದೇ ವಾಹನಗಳನ್ನು ಅಮಾನತು ಪಡಿಸಿರುವುದಿಲ್ಲ. ಬಸ್ಸನ್ನು ನೋಡಿದರು ಸಹ ಗುರುತಿಸಲು ಆಗುವುದಿಲ್ಲ. ಇದನ್ನು ಹೊರತು ಪಡಿಸಿ ಪ್ರಕರಣದ ಬಗ್ಗೆ ಇನ್ನೇನು ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕಃ 21-04-2014 ರಂದು ಮಧ್ಯಾಹ್ನ 2.15 ಗಂಟೆಯ ಸಮಯದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆಎ-13-ಎಫ್-1882 ನ್ನು ಅದರ ಚಾಲಕ ರಾಷ್ಟ್ರೀಯ ಹೆದ್ದಾರಿ-48 ರಲ್ಲಿ ಮಂಗಳೂರಿನಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸೋಲೂರು ಡೈರಿ ಸರ್ಕಲ್ ಬಳಿ ಬಸ್ಸನ್ನು ಏಕಾಏಕಿ ಪುಟ್ ಪಾತ್ ಗೆ ಇಳಿಸಿದ ಪರಿಣಾಮ ಬಸ್ಸು ಪಲ್ಟಿಯಾಗಿ ಅಪಘಾತಕ್ಕೆ ಒಳಗಾಗಿದ್ದು, ಈ ಸಂಬಂಧ ಪೋಲಿಸರು ಕೃತ್ಯ ನಡೆದ ಸ್ಥಳಕ್ಕೆ ಅದೇ ದಿವಸ ಸಂಜೆ 4.45 ಗಂಟೆಯ ಸಮಯದಲ್ಲಿ ಭೇಟಿ ನೀಡಿದಾಗ ಚಾಸಾ-2 ರವರು ಹಾಜರಿದ್ದು, ಅಪಘಾತದ ಸ್ಥಳ ತೋರಿಸಿದ್ದು, ನನ್ನ ಸಮಕ್ಷಮ ಸಂಜೆ 4.45 ರಿಂದ 5.15 ರವರೆಗೆ ನಿಪಿ-1 ರಂತೆ ಮಹಜರ್ ಕ್ರಮ ಅನುಸರಿಸಿ, ಮಹಜರ್ ಕಾಲಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆಎ-13-ಎಫ್-1882 ನ್ನು ಅಮಾನತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಿಪಿ-1 ರ ಕಾಲಕ್ಕೆ ನೀವು ಸ್ಥಳದಲ್ಲಿ ಹಾಜರಿದ್ದು, ಓದಿ ಕೇಳಿ ತಿಳಿದುಕೊಂಡು ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಗೆ ಸಹಾಯ ಮಾಡುವ ಸಲುವಾಗಿ ನಿಪಿ-1 ರಲ್ಲಿರುವ ಎಲ್ಲಾ ಅಂಶಗಳು ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಸಿ.ಸಿ. ಸಂಖ್ಯೆ: 85 / 2015**
**ಚಾಸಾ-03 / ಪ್ರಾಸಾ-01**

**ಪಾಟೀ ಸವಾಲು** ಃ- **ಶ್ರೀ. ಜಿ.ಎನ್.ಎಸ್.** ವಕೀಲರಿಂದ **ಆರೋಪಿ** ಪರವಾಗಿ ಃ-

ಆರೋಪಿ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**